- ದಾವಣಗೆರೆ ಜಿಲ್ಲೆಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಡಿ ವರ್ತಕರಿಂದ ನೇರವಾಗಿ ಮಾಸಿಕ ನಮೂನೆಗಳ ಆಧಾರದ ಮೇಲೆ ತೆರಿಗೆ ವಸೂಲಿ ಮಾಡುವ 3 ಕಛೇರಿಗಳಿದ್ದು,(ದಾವಣಗೆರೆಯಲ್ಲಿ ಎರಡು, ಹರಿಹರದಲ್ಲಿ ಒಂದು) ಇವುಗಳಲ್ಲಿ ಒಟ್ಟು 12,397 ನೋಂದಾಯಿತ ವರ್ತಕರುಗಳಿರುತ್ತಾರೆ.
- ಈ ಕಛೇರಿಗಳಿಂದ 2011-12 ನೇ ಸಾಲಿನಲ್ಲಿ ಜನವರಿ 2012 ರ ಅಂತ್ಯದವರೆಗೆ ಒಟ್ಟು 84.10 ಕೋಟಿ ರೂ. ಗಳು ತೆರಿಗೆ ಸಂಗ್ರಹಣೆಯಾಗಿದ್ದು,ಹಿಂದಿನ ಸಾಲಿಗೆ ಹೋಲಿಸಿದಾಗ ಇದರ ಬೆಳವಣಿಗೆ ದರ 20.17 ಇದ್ದು, ಹೆಚ್ಚಿನ ಪ್ರಗತಿ ಸಾಧಿಸಲಾಗಿದೆ
- ಕರಸಂದಾಯ ವ್ಯವಸ್ಥೆಯಲ್ಲಿ ವರ್ತಕರಿಗೆ ಅನುಕೂಲ ಮಾಡಿಕೊಡಲು ಮತ್ತು ಪಾರದರ್ಶಕತೆಯನ್ನು ತರಲು ಸಾಕಷ್ಟು ತೆರಿಗೆ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.ಇವುಗಳಲ್ಲಿ ತೆರಿಗೆದಾರರು ತಮ್ಮ ಸರಕುಗಳನ್ನು ಸಾಗಾಣಿಕೆ ಮಾಡುವಾಗ ಬರುತ್ತಿದ್ದ ಕುಂದು ಕೊರತೆಗಳನ್ನು ನಿವಾರಿಸಿ ಅತ್ಯಂತ ಸರಳ ಮತ್ತು ಸೂಕ್ತವಾದ ವ್ಯವಸ್ಥೆಯಾದ **"ಇ-ಸುಗಮ"** ಅಂತರ್ಜಾಲ ವ್ಯವಸ್ಥೆಯನ್ನು ರೂಪಿಸಲಾಗಿದೆ. ಇದನ್ನು ಇನ್ನೂ ಸರಳೀಕರಣಗೊಳಿಸಿ ವರ್ತಕರ ಹಿತದೃಷ್ಠಿಯಿಂದ ಮತ್ತು ಸುಗಮವಾಗಿ ಸಾಗಾಣಿಕೆಯನ್ನು ನಿರ್ವಹಿಸಲು ಸಂಚಾರಿ ದೂರವಾಣಿ ಮೂಲಕ ಸಹ **"ಇ_ಸುಗಮ"** ಬಳಸಿಕೊಳ್ಳಲು **"ಎಮ್-ಸುಗಮ"** ಎಂಬ ಹೊಸ ತಂತ್ರಾಂಶವನ್ನು ವ್ಯವಸ್ಥೆಗೊಳಿಸಲಾಗಿದೆ.
- ತೆರಿಗೆದಾರರು ತಮ್ಮ ಮಾಸಿಕ ವಹಿವಾಟು ವರದಿಯನ್ನು ಸಲ್ಲಿಸಲು ಮತ್ತು ತೆರಿಗೆಯನ್ನು ಪಾವತಿಸಲು ಸಹ **"ಇ-ವರದಿ"** ಎಂಬ ಅತ್ಯಂತ ಸರಳೀಕೃತ ಅಂತರ್ಜಾಲ ರೂಪಿಸಲಾಗಿದೆ.
- ಇದೇ ರೀತಿ ವೃತ್ತಿ ತೆರಿಗೆ, ಕರ್ನಾಟಕ ಮನರಂಜನಾ ತೆರಿಗೆ ಮತ್ತು ವಿಲಾಸ ತೆರಿಗೆ ಕಾಯ್ದೆಯಡಿಯಲ್ಲಿ ತೆರಿಗೆ ವಹಿವಾಟನ್ನು ಘೋಷಿಸಿಕೊಳ್ಳಲು ಮತ್ತು ತೆರಿಗೆ ಪಾವತಿಸಲು **"ಇ- ಪ್ರೇರಣ ಸಾಫ್ಟ್"** ಎಂಬ ಅಂತರ್ಜಾಲ ರೂಪಿಸಲಾಗಿದೆ.
- ವರ್ತಕರುಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮತ್ತು ಗರಿಷ್ಟ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸಲು ಹಾಗು ಸಮಯದ ಸದುಪಯೋಗ ಮತ್ತು ಕನಿಷ್ಠ ಮಾನವ ಸಂಪನ್ಮೂಲ ಬಳಕೆ, ಈ ಎಲ್ಲಾ ನಿಟ್ಟಿನಲ್ಲಿ ಅಂತರ್ಜಾಲದ ಮೂಲಕ **"ಇ-ಪೇಮೆಂಟ್ ,ಇ-ವರದಿ ಇ-ಸುಗಮ, ಇ-ಸುವೇಗ ಮತ್ತು ಇ-ಪ್ರೇರಣ"** ಮುಂತಾದ ವ್ಯವಸ್ಥೆಗಳನ್ನು ವರ್ತಕರುಗಳಿಗೆ ಕಲ್ಪಿಸಲಾಗಿದೆ.
- ಇದಲ್ಲದೆ ವರ್ತಕರ ವ್ಯಾಪಾರ ವಹಿವಾಟುಗಳನ್ನು ಲೆಕ್ಕ ಪರಿಶೋಧನೆಗೆ ಒಳಪಡಿಸಿ ಬಾಕಿ ತೆರಿಗೆ ಸಂಗ್ರಹಣೆಯನ್ನು ತ್ವರಿತಗತಿಯಲ್ಲಿ ಸಂದಾಯ ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಮತ್ತುತೆರಿಗೆಯನ್ನು ಮಾಸಿಕ ವರದಿಗಳಲ್ಲಿ ಸಲ್ಲಿಸದಿರುವ ವರ್ತಕರುಗಳನ್ನು ಜಾರಿ ವಿಭಾಗದ ಅಧಿಕಾರಿಗಳಿಂದ ತಪಾಸಣೆಗೆ ಒಳಪಡಿಸಿ ಹೆಚ್ಚಿನ ತೆರಿಗೆ ಸಂಗ್ರಹಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲೂ ಸಹ ಗಣಕೀಕರಣದ ವ್ಯವಸ್ಥೆಯನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆ.

**ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಗುಣಮಟ್ಟದ ಕಾರ್ಯಗಳನ್ನು ಕೈಗೊಂಡು ಪರಿಣಾಮಕಾರಿಯಾದ ಫಲಿತಾಂಶವನ್ನು ಪಡೆಯಲು ಯಶಸ್ವಿಯಾಗಿದ್ದಾರೆ.**

**ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ),**
**ಮೌಲ್ಯವರ್ಧಿತ ತೆರಿಗೆ ವಿಭಾಗ, ದಾವಣಗೆರೆ**